ಶ್ರೀ ಎಂ. ವಿ. ಕೃಷ್ಣಪ್ಪ.—ಅದು ರೂಲ್ಸಿನಲ್ಲಿ ಇಲ್ಲ. ಕೆಲವರು ಕಾಫಿ ವ್ಯವಸಾಯಕ್ಕೆ ಎಂದು ಜಮೀನನ್ನು ತೆಗೆದುಕೊಂಡು ಅದನ್ನು ಮಾರಿಕೊಳ್ಳುತ್ತಾರೆ. ಅದಕ್ಕೋಸ್ಕರ ಕೆಲವು ಕಡೆ ಕಾಫಿ ವ್ಯವಸಾಯಕ್ಕೆ ಭೂಮಿಯನ್ನು ಕೊಡಬೇಕಾದರೆ 500 ರೂಪಾಯಿ ಡಿಪಾಜಿಟ್ ಇಡಬೇಕೆಂದು ಡಿವಿಜನರ್ ಕಮೀಷನರು ಮಾಡಿದ್ದಾರೆ. Unless you have Rs. 500 to raise coffee plantation, it is not good for you to take land and then sell it. ಈ ದೃಷ್ಟಿಯಿಂದ ಡಿವಿಜನರ್ ಕಮೀಷನರು ಅವರ ಒಂದು ಪರ್ಸನಲ್ ಅಭಿಪ್ರಾಯವನ್ನು ಅವರು ಕೊಟ್ಟರು. ಆ ವಿಷಯವನ್ನು ಅವರು ನನಗೆ ಹೇಳಿದ್ದಾರೆ. ಆದರೆ ಅದು ರೂಲ್ಸಿನಲ್ಲಿ ಇಲ್ಲ. Divisional commissioner cannot insist that every one who takes land for coffee growing should deposit Rs. 500 per acre.

ಶ್ರೀಮತಿ ಬಿ. ಎಲ್. ಸುಬ್ಬಮ್ಮ.—ದೇಶಕ್ಕೆ ಹೆಚ್ಚಿಗೆ ಸಂಪಾದನೆಯನ್ನು ಒದಗಿಸತಕ್ಕ ಕಾಫೀ ಬೆಳೆಯನ್ನು ಬೆಳೆಯತಕ್ಕ ರೈತರು 5 ವರ್ಷಗಳವರೆಗೂ ಯಾವ ಸಂಪಾದನೆಯೂ ಇಲ್ಲದೆ ಕೆಲಸ ಮಾಡುತ್ತಾರೆ. ಆದ್ದರಿಂದ ಅವರಿಗೆ 1961ನೇ ಇಸವಿಯಲ್ಲಿ ಇದ್ದಂತಹ ಅನುಕೂಲವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ವಿ. ಕೃಷ್ಣಪ್ಪ.—ಕಾಫಿ ಪ್ಲಾಂಟೇಷನ್ನಿಗೆ ಪ್ರೋತ್ಸಾಹ ಕೊಡಬೇಕೆಂದು ಸರ್ಕಾರದ ಉದ್ದೇಶ ಇದೆ. ಕೇಂದ್ರ ಸರ್ಕಾರದವರೂ ಸಹ ಕಾಫೀ ಪ್ಲಾಂಟೇಷನ್ನಿಗೆ ಸೀಲಿಂಗ್ ಹೆಚ್ಚಿಗೆ ಅನ್ವಯಿಸಬೇಡಿ ಅವರಿಗೆ ಕನ್ಸೆಷನ್ ಕೊಡಿ ಎಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ಒಬ್ಬರು ಸ್ಪೆಷಲ್ ಆಫೀಸರನ್ನೇ ಇಟ್ಟು ದರಕಾಸ್ತು ಜಮೀನನ್ನು ಡಿಸ್‌ಪೋಸ್ ಮಾಡುತ್ತಿದ್ದೇವೆ. ಚಿಕ್ಕ ಮಗಳೂರು ಜಿಲ್ಲೆಯಲ್ಲಿ ಕಾಫೀ ಬೆಳೆಯುವುದಕ್ಕೋಸ್ಕರ ಬೇಕಾದಷ್ಟು ಜಮೀನನ್ನು ಕೊಟ್ಟಿದ್ದೇವೆ. ಈಗ ಇತ್ತೀಚೆಗೆ ಏನಾಗಿದೆಯೆಂದರೆ ಕಾಫೀ ವ್ಯವಸಾಯಕ್ಕೋಸ್ಕರ ದರಕಾಸ್ತು ಜಮೀನನ್ನು ಕೊಟ್ಟರೆ ಅದರಲ್ಲಿರತಕ್ಕ ಮರಗಳನ್ನೆಲ್ಲಾ ಕಡಿದು ಕೆಲವರು ಹಣವನ್ನು ಮಾಡಿಕೊಳ್ಳುತ್ತಿದ್ದಾರೆಂದು ಕಂಪ್ಲೆಂಟ್ ಬಂದಿರುವುದರಿಂದ ಅದನ್ನು ಸ್ವಲ್ಪ ರಿಸ್ಟ್ರಿಕ್ಟ್ ಮಾಡಬೇಕೆಂದು ಅದಕ್ಕೆ ಸ್ವಲ್ಪ ರಿಸ್ಟ್ರಿಕ್ಷನ್ ತಂದಿದ್ದೇವೆ.

Sri A. P. APPANNA.—Has it come to the notice of the Government that where small planters have encroached small areas, they have been forcibly evicted and where big planters have encroached on 70 to 80 acres, instead of evicting them, they are confirmed by Government ?

Mr. SPEAKER.— These are individual instances, about which it is not good to put question during question hour. I do not say these are not relevant, but these are not good questions.

Sri A. P. APPANNA.—We only want to bring to the notice of the Government.....

Sri S. NIJALINGAPPA.—May I say a word in this regard ? I received complaints in this behalf and I have asked that a thorough enquiry be made. We have also said that poor people should not be put to hardships in this behalf.

Diversion of Kannahole to River Sharavathy near Mavinagondi, Siddapur Taluk.

* *Q.*—222. **Sri V. S. LAKSHMIKANTHAPPA** (Sagar).—

Will the Government be pleased to state :—

(*a*) whether any survey has been made to divert Kannahole joining Varada, to river Sharavathy near Mavinagondi, Siddapur Taluk to control flood havoc in Sagar Taluk and to get 4,000 acres of fertile land for fresh cultivation ;

(*b*) the approximate cost of the same ?

A.—Sri S. NIJALINGAPPA (Chief Minister).—

(*a*) No. But schemes for control of flood havoc are under investigation.

(*b*) Does not arise.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಸಾಗರ ತಾಲ್ಲೂಕಿನಲ್ಲಿ ಪ್ರವಾಹದಿಂದಾಗುತ್ತಿರುವ ಹಾನಿಯನ್ನು ತಡೆಗಟ್ಟುವ ಬಗ್ಗೆ ಯೋಜನೆಗಳನ್ನು ಪರಿಶೀಲಿಸಲಾಗುತ್ತಿದೆಯೆಂದು ಹೇಳಿದ್ದೀರಿ. ಇದರಲ್ಲಿ ಯಾವ ಯಾವ ಯೋಜನೆಗಳು ಪರಿಶೀಲನೆಯಲ್ಲಿವೆ? ಮತ್ತು ಕಣ್ಣ ಹೊಳೆಯನ್ನು ವರದಾ ನದಿಯಿಂದ ಶರಾವತಿ ನದಿಗೆ ತಿರುಗಿಸುವ ಯೋಚನೆ ಇದೆಯೇ ?

† ಶ್ರೀ ಎಸ್. ನಿಜಲಿಂಗಪ್ಪ.—ಆ ಹೊಳೆಯನ್ನು ವರದಾನದಿಯಿಂದ ಶರಾವತಿಗೆ ತಿರುಗಿಸುವುದಕ್ಕೆ ಆಗುವುದಿಲ್ಲ. ಏತಕ್ಕೆಂದರೆ ಆದನ್ನು ಶರಾವತಿಗೆ ತಿರುಗಿಸಿದರೆ ಅದು ಕಾಪೇರಿ ಬೇಸಿನ್ನಿಂದ ಬೇರೆಕಡೆಗೆ ಹೋಗುವಾಗ ಅದು ಕೃಷ್ಣಾ ಬೇಸಿನ್ನಿಗೆ ಹೋಗ ಬೇಕಾಗುತ್ತದೆ. ಅದು ಸಾಧ್ಯವಾಗುವುದಿಲ್ಲ. ವರದಾನದಿಯಿಂದ ಆಗಿಂದಾಗ್ಗೆ ಹಾನಿಗಳು ಆಗುತ್ತಿರುತ್ತವೆ. ಆದ್ದರಿಂದ ಬೇರೆಕಡೆ ಒಂದು ಅಡ್ಡಗಟ್ಟೆಯನ್ನು ಹಾಕಿ ನೆರೆಹಾನಿಯನ್ನು ತಪ್ಪಿಸಬೇಕೆಂದು ಪ್ರಯತ್ನಗಳು ನಡೆಯುತ್ತಿವೆ.

ಶ್ರೀ ವಿ. ಎಸ್. ಲಕ್ಷ್ಮೀಕಾಂತಪ್ಪ.—ಅದಕ್ಕೆ ಅಡ್ಡಗಟ್ಟೆಯನ್ನು ಹಾಕುವುದರಿಂದ ಅಲ್ಲಿ ಉಪಯೋಗವಾಗುವುದಿಲ್ಲ. ವರದಾನದಿಯ ಉಪನದಿಯನ್ನು ಶರಾವತಿಯ ಪಾತ್ರಕ್ಕೆ ಬದಲಾಯಿಸುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಬಹಳ ದಿವಸಗಳಿಂದ ಬೇಡಿಕೆ ಇದೆ. ಆ ನದಿಯ ಪ್ರವಾಹದ ಹಾನಿಯಿಂದ ನುಮಾರು 25 ಸಾವಿರ ಎಕರೆಯ ಬೆಳೆಯು ಹಾಳಾಗುತ್ತಿದೆ. ಸರ್ಕಾರದವರು ಅದನ್ನು ಗಮನಿಸಿ ಆದಷ್ಟು ಜಾಗ್ರತೆ ಇದನ್ನು ಪುನರ್ ಪರಿಶೀಲನೆ ಮಾಡುವುದಕ್ಕೆ ಯೋಚನೆ ಮಾಡುತ್ತಿರಾ ?

ಶ್ರೀ ಎಸ್. ನಿಜಲಿಂಗಪ್ಪ.—ಅದನ್ನು ಶರಾವತಿಯ ಪಾತ್ರಕ್ಕೆ ಕಳುಹಿಸುವುದಕ್ಕೆ ಆಗುವುದಿಲ್ಲ. ಅಲ್ಲಿ ನೆರೆಹಾನಿಯನ್ನು ತಪ್ಪಿಸುವುದಕ್ಕೆ ಸ್ಪಷ್ಟವಾದ ಅಭಿಪ್ರಾಯ ಬಂದಿದೆ. ಅಲ್ಲಿ ಆ ನದಿಗೆ ಅಡ್ಡಗಟ್ಟೆಯನ್ನು ಹಾಕುವುದಕ್ಕೆ ಇಕ್ವೆಸ್ಟಿಗೇಷನ್ ನಡೆಯುತ್ತಿದೆ. ಹಾಗೆ ಮಾಡುವುದರಿಂದ ಅಲ್ಲಿ ಸಾವಿರಾರು ಎಕರೆ ಜಮೀನನ್ನೂ ಸಾಗುವಳಿ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಅದನ್ನು ನಾವು ನೋಡುತ್ತಿದ್ದೇವೆ.

Amount spent for the Construction of Colonies for Pitchaguntas of Marangere and for Voddars of Nimbakaipura in Hoskote Taluk.

**Q.*—233. Sri B. CHANNABYRE GOWDA (Hoskote).—

Will the Government be pleased to state :—

(*a*) the amount spent for the construction of a colonies for the Pitchaguntas of Marangere and for the Voddars of Nimbakaipura, Hoskote Taluk ;

(*b*) the number of persons who have not been issued building materials and cash grants so far ;

(*c*) the reasons for the non-completion of 7 houses in Nimbakaipura and 3 houses in Marangere ;

(*d*) the number of applications received by them from the aggrieved persons in this behalf ;

(*e*) if so, the action taken in the matter ?

A.—Smt. YASHODHARA DASAPPA (Minister for Social Welfare).—

(*a*) Marangere	...	Rs. 29,200
Nimbakaipura	...	Rs. 27,500